

ನೋಡುತ್ತಾನೆ ಹುಡುಗಿ ನಾಪತ್ತೆ. ಎಲ್ಲಿ ಹೋದಳು ಇವಳು... ಅಂದುಕೊಳ್ಳುತ್ತಾ ಅಲ್ಲೆ ಸುತ್ತ ಮುತ್ತ ತಿರುಗಾಡಿದ. ಸುಮಾರು ಅರ್ಧ ಗಂಟೆ ಆಯಿತು. ತಲೆಯ ಮೇಲೆ ಹುಲ್ಲಿನ ಹೊರೆ ಹೊತ್ತ ಹುಡುಗಿ. ತನ್ನ ಜೊತೆಯಲ್ಲಿ ಮತ್ತಿಬ್ಬರು ಹುಡುಗಿಯರನ್ನೂ ಕರೆತಂದಿದ್ದಾಳೆ. ಕಾಡು ಹಣ್ಣುಗಳನ್ನು ಬುಟ್ಟಿಯಲ್ಲಿಟ್ಟುಕೊಂಡು. ಮತ್ತೋರ್ವಳು ಒಂದು ಸಣ್ಣ ಬಿಂದಿಗೆಯಲ್ಲಿ ಒಂಟೆ ಹಾಲು ಕರೆದು ತಂದಿದ್ದಾಳೆ. ತಲೆ ಎತ್ತಿ ನೋಡುತ್ತಾನೆ... ಅನತಿ ದೂರದಲ್ಲಿ ಒಂಟೆಗಳ ಹಿಂಡು ತಮ್ಮ ಮೇವನ್ನು ಮೇಯುತ್ತಿವೆ. ತಲೆ ಎತ್ತಿ ಮೆಲುಕು ಹಾಕುತ್ತಿವೆ. ಪಕ್ಷಿ, ಕೊಕ್ಕರೆಗಳ ಹಿಂಡು ಹಿಂಡು ಹುಲ್ಲಿನ ಮೈದಾನದಲ್ಲಿ ಅಲ್ಲಲ್ಲೇ ಓಡಾಡುತ್ತಿವೆ. ‘ಒಡೆಯಾ ಒಪ್ಪಿಸಿಕೊಳ್ಳಿ’ ಅಂಜು ತನ್ನ ಇನಿದಾದ ದನಿಯಲ್ಲಿ ಹೇಳಿದಳು. ಮತ್ತು ಅವಳು ಅವನ ಕುದುರೆಗೆ ಹುಲ್ಲು ತಿನ್ನಿಸುವಲ್ಲಿ ಮಗ್ನಳಾದಳು. ಬೇರೆ ಹುಡುಗಿಯರು ದೂರ ನಿಂತು ನೋಡುತ್ತಿದ್ದಾರೆ. ಕಾಡು ಹಣ್ಣನ್ನು ಬಾಯಲ್ಲಿ ಕಚ್ಚಿದವನಿಗೆ ಅದು ಅತ್ಯಂತ ರುಚಿ ಎನ್ನಿಸಿತು. ಸರ ಸರನೆ ಎಲ್ಲವನ್ನೂ ತಿಂದು ನೀರು ಕುಡಿದ. ಹುಲ್ಲು ಹಾಸಿನ ಮೇಲೆ ಮಲಗಿದ. ಅವನು ನಿದ್ರೆಯಿಂದೇಳುವ ವೇಳೆಗೆ ಅಲ್ಲಿ ಯಾರೂ ಇರಲಿಲ್ಲ. ಹೊಟ್ಟೆ ಚುರ್ ಗುಟ್ಟುತ್ತಿತ್ತು. ಅವನು ಎದ್ದು ನಿಂತು ಮೈ ಮುರಿದು ಸುತ್ತಲೂ ನೋಡಿದ. ಸ್ವಲ್ಪ ದೂರದಲ್ಲಿ ಮರದ ಕೆಳಗೆ ಹುಡುಗಿಯರೆಲ್ಲ ಕುಳಿತು ಊಟ ಹಂಚಿಕೊಳ್ಳುತ್ತಿದ್ದರು. ಅಂಜು ಬುತ್ತಿಯಿಂದ

